# ಮೈಸೂರು ವಿಶ್ವವಿದ್ಯಾನಿಲಯ

(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)

(ಎನ್.ಐ.ಆರ್.ಎಫ್–2024: ರಾಜ್ಯ ಸಾರ್ವಜನಿಕ ವಿಶ್ವವಿದ್ಯಾನಿಲಯ ವರ್ಗದಲ್ಲಿ 19ನೇ ಸ್ಥಾನ, ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನ)

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ
ಮೈಸೂರು–570 005

ವಿಷಯ: 2024–25ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ

ಉಲ್ಲೇಖ: 1. ದಿನಾಂಕ 26.08.2024 ರಂದು ನಡೆದ ಸ್ಥಾಯಿ ಸಮಿತಿ ಸಭೆಯ ನಡಾವಳಿಗಳು
2. ದಿನಾಂಕ 29.10.2024 ರಂದು ನಡೆದ ಸಿಂಡಿಕೇಟ್ ಸಭೆಯ ಅನುಮೋದನೆ

*****

## ಆದೇಶ ಸಂಖ್ಯೆ: ವಿಘ3/42/2023–24 ದಿನಾಂಕ 14.11.2024

ದಿನಾಂಕ 26.08.2024ರ ಸ್ಥಾಯಿ ಸಮಿತಿ ಸಭೆಯ ನಡಾವಳಿ ಮತ್ತು ದಿನಾಂಕ 29.10.2024 ರಂದು ನಡೆದ ಸಿಂಡಿಕೇಟ್ ಸಭೆಯ ಅನುಮೋದನೆಯಂತೆ 2024–25ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ಕೆಳಕಂಡ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ವಿಶ್ವವಿದ್ಯಾನಿಲಯದ ಅನುಮತಿಯನ್ನು ನೀಡಲಾಗಿದೆ.

1. ಸಂಶೋಧಕರುಗಳ ಶಿಷ್ಯವೇತನ:

ಅ) ಕಿರಿಯ ಸಂಶೋಧಕರಿಗೆ ಶಿಷ್ಯವೇತನ (163 ಸಂಶೋಧಕರು)

ಏಪ್ರಿಲ್ 2024ರಿಂದ ಮಾರ್ಚ್ 2025ನೇ ಸಾಲಿನ ಕಿರಿಯ ಸಂಶೋಧಕರಿಗೆ ಮಾಸಿಕ ಶಿಷ್ಯವೇತನ ರೂ. 20,000/– + ಹೆಚ್.ಆರ್.ಎ. ಶೇ 16% (ರೂ. 3,200/–) ರಂತೆ ಹಾಗೂ ವಾರ್ಷಿಕ ಸಾದಿಲ್ವಾರು ವೆಚ್ಚವಾಗಿ ಕಲಾ ಮತ್ತು ವಾಣಿಜ್ಯ ವಿಭಾಗದ ಸಂಶೋಧಕರಿಗೆ ರೂ. 8,000/– ಮತ್ತು ವಿಜ್ಞಾನ ವಿಭಾಗದ ಸಂಶೋಧಕರಿಗೆ ರೂ. 10,000/– ಗಳನ್ನು ನೀಡಲು ಅಂದಾಜು ಮಾಡಲಾದ ಮೊತ್ತ ರೂ. **4,67,15,200/–**

ಆ) ಹಿರಿಯ ಸಂಶೋಧಕರಿಗೆ ಶಿಷ್ಯವೇತನ (50 ಸಂಶೋಧಕರು)

ಏಪ್ರಿಲ್ 2024 ರಿಂದ ಮಾರ್ಚ್ 2025ನೇ ಸಾಲಿನ ಹಿರಿಯ ಸಂಶೋಧಕರಿಗೆ ಮಾಸಿಕ ಶಿಷ್ಯವೇತನ ರೂ. 22,000/– + ಹೆಚ್.ಆರ್.ಎ. ಶೇ 16% (ರೂ. 3,520/–) ರಂತೆ ಹಾಗೂ ವಾರ್ಷಿಕ ಸಾದಿಲ್ವಾರು ವೆಚ್ಚವಾಗಿ ಕಲಾ ಮತ್ತು ವಾಣಿಜ್ಯ ವಿಭಾಗದ ಸಂಶೋಧಕರಿಗೆ ರೂ. 10,000/– ಮತ್ತು ವಿಜ್ಞಾನ ವಿಭಾಗದ ಸಂಶೋಧಕರಿಗೆ ರೂ. 12,000/– ಗಳನ್ನು ನೀಡಲು ಅಂದಾಜು ಮಾಡಲಾದ ಮೊತ್ತ ರೂ. **1,58,62,000/–**

**ತೀರ್ಮಾನ: ಮೇಲಿನ "ಅ)" ಮತ್ತು "ಆ)" ರ ಒಟ್ಟು ಮೊತ್ತ ರೂ. 6,25,77,200/– ಗಳನ್ನು ಭರಿಸಲು ಸಭೆಯು ಅನುಮೋದಿಸಿತು.**

**2) ಬೌದ್ಧಿಕ ಕೌಶಲ್ಯಾಭಿವೃದ್ಧಿ ಕಾರ್ಯಾಗಾರ:**

ಪ್ರತೀ ವರ್ಷದಂತೆ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಯಶಸ್ವಿಯಾಗಿ ಎದುರಿಸಲು ಅನುಕೂಲವಾಗುವಂತೆ ನುರಿತ ವಿಷಯ ತಜ್ಞರನ್ನು ಕರೆಸಿ, ಬೌದ್ಧಿಕ ಕೌಶಲ್ಯಾಭಿವೃದ್ಧಿ ಕಾರ್ಯಾಗಾರವನ್ನು (Brain Storming Workshop) ಎರಡು ದಿನ ಕೇಂದ್ರಸ್ಥಾನದಲ್ಲಿ ನಡೆಸಲಾಗುತ್ತಿದ್ದು, **2024–25**ನೇ ಸಾಲಿನಲ್ಲಿಯೂ ಸಹ ಕಾರ್ಯಾಗಾರವನ್ನು ನಡೆಸಲು ತಗಲುವ ಅಂದಾಜು ಮೊತ್ತ ರೂ. **3,00,000/–** ಗಳನ್ನು ಭರಿಸುವ ಬಗೆಗೆ.

ತೀರ್ಮಾನ: ಸಭೆಯು ಅನುಮೋದಿಸಿತು.

3) **ಕೊಠಡಿ ಬಾಡಿಗೆ ಧನಸಹಾಯದ ವೆಚ್ಚ:**

ವಿಶ್ವವಿದ್ಯಾನಿಲಯದ ಅಂಗ ಕಾಲೇಜು/ಸ್ನಾತಕೋತ್ತರ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸ್ವಂತ ನಿವಾಸವಿಲ್ಲದ, **ವಿದ್ಯಾರ್ಥಿನಿಲಯಗಳಲ್ಲಿ ವಾಸವಿಲ್ಲದೆ, ಬಾಡಿಗೆ ಕೊಠಡಿಗಳಲ್ಲಿ ವಾಸಿಸುತ್ತಿರುವ ಸ್ಥಳೀಯರಲ್ಲದ** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ವಿಭಾಗಕ್ಕೆ/ಕಾಲೇಜಿಗೆ ಪ್ರವೇಶಾತಿ ಪಡೆದ ದಿನಾಂಕದಿಂದ ಪರೀಕ್ಷೆ ಮುಗಿಯುವವರಗೆ ತಿಂಗಳಿಗೆ ರೂ. 300/-ರಂತೆ 11 ತಿಂಗಳಿಗೆ ಕೊಠಡಿ ಬಾಡಿಗೆ ಧನಸಹಾಯವಾಗಿ 2024-25ನೇ ಸಾಲಿನಲ್ಲಿ ಅಂದಾಜು ಮಾಡಿರುವ 120 ವಿದ್ಯಾರ್ಥಿಗಳಿಗೆ ನೀಡಲು ಬೇಕಾಗಿರುವ ಮೊತ್ತ ರೂ. 3,96,000/- ಗಳು **ಕಳೆದ ಸಾಲಿನಂತೆ ಮುಂದುವರೆಸುವ ಬಗೆಗೆ ಹಾಗೂ ಅನುಮತಿಗಾಗಿ.**

**ತೀರ್ಮಾನ: ಸಭೆಯು ಅನುಮೋದಿಸಿತು.**

4) **ಪ್ರೌಢ ಪ್ರಬಂಧ ಧನಸಹಾಯದ ವೆಚ್ಚ:**

ವಿಶ್ವವಿದ್ಯಾನಿಲಯದ ಕಾಲೇಜು/ಸ್ನಾತಕೋತ್ತರ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ತಮ್ಮ ಅಂತಿಮ ಪದವಿ/ಸೆಮಿಸ್ಟರ್‌ಗಳಲ್ಲಿ ಪ್ರೌಢಪ್ರಬಂಧವನ್ನು ಸಲ್ಲಿಸುವುದು ಕಡ್ಡಾಯವಾಗಿದ್ದಲ್ಲಿ, ಅಂತಹ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ರೂ. 1,500/- ರಂತೆ, ಸ್ನಾತಕ ಪದವಿ ವಿದ್ಯಾರ್ಥಿಗಳಿಗೆ ರೂ. 1,200/- ರಂತೆ ಮತ್ತು ಡಿಪ್ಲೋಮ ವಿದ್ಯಾರ್ಥಿಗಳಿಗೆ ರೂ. 750/- ರಂತೆ 2024-25ನೇ ಸಾಲಿನಲ್ಲಿ ಪ್ರೌಢಪ್ರಬಂಧ ಧನಸಹಾಯ ನೀಡಲು ಅನುಮತಿಗಾಗಿ.

2024-25ನೇ ಸಾಲಿನಲ್ಲಿ ಅಂದಾಜು ಮಾಡಿರುವ 500 ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ರೂ. 7,50,000/-ಗಳು, 250 ಸ್ನಾತಕ ಪದವಿ ವಿದ್ಯಾರ್ಥಿಗಳಿಗೆ ರೂ. 3,00,000/- ಮತ್ತು 05 ಡಿಪ್ಲೋಮ ವಿದ್ಯಾರ್ಥಿಗಳಿಗೆ ರೂ. 3,750/-ಗಳು ಒಟ್ಟು 755 ವಿದ್ಯಾರ್ಥಿಗಳಿಗೆ ಪ್ರೌಢಪ್ರಬಂಧದ ಧನಸಹಾಯವಾಗಿ ನೀಡಲು ಅಂದಾಜು ಮಾಡಲಾಗಿರುವ ಒಟ್ಟು ಮೊತ್ತ ರೂ. 10,53,750/-ಗಳ ಅನುಮೋದನೆಗಾಗಿ.

**ತೀರ್ಮಾನ: ಸಭೆಯು ಅನುಮೋದಿಸಿತು.**

5) **ಕ್ರೀಡೆ ಮತ್ತು ಪಠ್ಯೇತರ ಚಟುವಟಿಕೆಗಳ ಧನಸಹಾಯದ ವೆಚ್ಚ:**

ವಿಶ್ವವಿದ್ಯಾನಿಲಯದ ಕಾಲೇಜು/ಸ್ನಾತಕೋತ್ತರ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ/ರಾಜ್ಯ/ರಾಷ್ಟ್ರ ಮಟ್ಟದಲ್ಲಿ ಕ್ರೀಡೆ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರೆ ಅಂತಹ ವಿದ್ಯಾರ್ಥಿಗಳಿಗೆ ತಲಾ ರೂ. 2,000/- ರಂತೆ ಧನಸಹಾಯವನ್ನು ಹಿಂದಿನ ಸಾಲಿನಂತೆಯೇ ನೀಡುವ ಬಗೆಗೆ.

2024-25ನೇ ಸಾಲಿನಲ್ಲಿ ಪ್ರತಿನಿದಿಸುವ ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ಪದವಿಯ 20 ವಿದ್ಯಾರ್ಥಿಗಳಿಗೆ ಅಂದಾಜು ಮೊತ್ತ ರೂ. 40,000/- ಗಳ ಅನುಮೋದನೆಗಾಗಿ.

**ತೀರ್ಮಾನ: ಸಭೆಯು ಅನುಮೋದಿಸಿತು.**

6) **UGC – NET / SLET ಪೂರ್ವಭಾವಿ ಪರೀಕ್ಷೆಗಳಿಗೆ ತರಬೇತಿ ನೀಡಲು ತಗಲುವ ವೆಚ್ಚ:**

UGC – NET / SLET ಪೂರ್ವಭಾವಿ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ತಗಲುವ ವೆಚ್ಚ ರೂ. 1,00,000/- ಗಳ ಅನುಮತಿಗಾಗಿ.

**ತೀರ್ಮಾನ: ಸಭೆಯು ಅನುಮೋದಿಸಿತು.**

7) ICS/KAS ಪೂರ್ವಭಾವಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮುಖ್ಯ ಪರೀಕ್ಷೆಗೆ ಅನುಕೂಲವಾಗುವಂತೆ ಪ್ರೋತ್ಸಾಹಧನ:

ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಲ್ಲಿ ಮತ್ತು ನೇರ ಆಡಳಿತಕ್ಕೊಳಪಟ್ಟ ಕೇಂದ್ರಗಳು/ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ 2024-25ನೇ ಶೈಕ್ಷಣಿಕ ಸಾಲಿನಲ್ಲಿ UPSC/KPSC ನಡೆಸುವ ನಾಗರೀಕ ಸೇವೆಗಳ (ICS/KAS) ಸ್ಪರ್ಧಾತ್ಮಕ ಪೂರ್ವಭಾವಿ ಪರೀಕ್ಷೆಯಲ್ಲಿ (Prelims) ಉತ್ತೀರ್ಣರಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 5 ವಿದ್ಯಾರ್ಥಿಗಳಿಗೆ ಮುಖ್ಯ ಪರೀಕ್ಷೆಗೆ ಅನುಕೂಲವಾಗಲು ರೂ. 10,000/- ಗಳಂತೆ ಪ್ರೋತ್ಸಾಹಧನವಾಗಿ ನೀಡಲು ಅಂದಾಜು ಮಾಡಲಾಗಿರುವ ಮೊತ್ತ ರೂ. 50,000/-ಗಳು, ಹಿಂದಿನ ಸಾಲಿನಂತೆ ಮುಂದುವರೆಸುವ ಬಗೆಗೆ ಹಾಗೂ ಅನುಮೋದನೆಗಾಗಿ.

ತೀರ್ಮಾನ: ಸಭೆಯು ಅನುಮೋದಿಸಿತು.

8) ಕಛೇರಿ ಕೆಲಸ ಕಾರ್ಯಗಳಿಗೆ ಬೇಕಾದ ಲೇಖನಿ ಸಾಮಗ್ರಿ ಖರೀದಿ:

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ಕಛೇರಿಗೆ ಅವಶ್ಯಕವಾಗಿ ಬೇಕಾಗುವ ಲೇಖನ ಸಾಮಗ್ರಿಗಳನ್ನು, ಜೆರಾಕ್ಸ್ ಟೋನರ್ ಹಾಗೂ ಪ್ರಿಂಟರ್ ಕಾಂಟ್ರಿಡ್ಜ್‌ಗಳನ್ನು 2024-25ನೇ ಸಾಲಿನಲ್ಲಿ ಖರೀದಿಸಲು ಅಂದಾಜು ವೆಚ್ಚ ರೂ. 50,000/- ಗಳ ಅನುಮತಿಗಾಗಿ.

ತೀರ್ಮಾನ: ಸಭೆಯು ಅನುಮೋದಿಸಿತು.

9) ಕಛೇರಿಗೆ ಸಾಮಗ್ರಿಗಳ/ಉಪಕರಣಗಳ ಖರೀದಿ ಮತ್ತು ಯಂತ್ರೋಪಕರಣಗಳ ರಿಪೇರಿ:

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ಕಛೇರಿಗೆ ಅನಿವಾರ್ಯವಾಗಿ ಬೇಕಾಗುವ ಸಾಮಗ್ರಿಗಳ/ಉಪಕರಣಗಳನ್ನು ಮತ್ತು ಕಂಪ್ಯೂಟರ್ ಪ್ರಿಂಟರ್‌ಗಳು ಮತ್ತು ಇತರ ಸಾಮಗ್ರಿಗಳನ್ನು ಖರೀದಿಸಲು ಮತ್ತು ಪ್ರಿಂಟರ್ ಮತ್ತು ಜೆರಾಕ್ಸ್ ಯಂತ್ರದ ರಿಪೇರಿಗಾಗಿ ಅಂದಾಜು ವೆಚ್ಚ ರೂ. 1,00,000/- ಗಳ ಅನುಮತಿಗಾಗಿ.

ತೀರ್ಮಾನ: ಸಭೆಯು ಅನುಮೋದಿಸಿತು.

10) ಕಾರ್ಯಕ್ರಮಗಳ / ಸಭೆಗಳ ವೆಚ್ಚ:

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ವತಿಯಿಂದ ನಡೆಯುವ ಸ್ಥಾಯಿ ಸಮಿತಿ ಸಭೆ ಮತ್ತು ಕಛೇರಿಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ನಡೆಸುವ ಸಭೆಗೆ ಹಾಜರಾದವರಿಗೆ ಲಘು ಉಪಹಾರಗಳನ್ನು ಒದಗಿಸಲು ಮತ್ತು ಆಸನ ಭತ್ಯೆಗಳನ್ನು ನೀಡಲು ತಗಲುವ ಅಂದಾಜು ವೆಚ್ಚ ರೂ. 15,000/-ಗಳ ಅನುಮೋದನೆಗಾಗಿ.

ತೀರ್ಮಾನ: ಸಭೆಯು ಅನುಮೋದಿಸಿತು.

11) ಆದಾಯ ತೆರಿಗೆ ಕಾರ್ಯನಿರ್ವಹಣೆ ಮತ್ತು ಲೆಕ್ಕಪರಿಶೋಧನೆ ವೆಚ್ಚ:

ಆದಾಯ ತೆರಿಗೆ ಕಟಾಯಿಸಿ, ಆದಾಯ ತೆರಿಗೆ ಇಲಾಖೆಗೆ ವ್ಯವಹರಿಸುವ ಸಲುವಾಗಿ ಹುಂಡಿಗಳನ್ನು ಪಾವತಿಸಲು ಬೇಕಾಗುವ ಅಂದಾಜು ಮೊತ್ತ ರೂ. 3,000/-ಗಳ ಅನುಮೋದನೆಗಾಗಿ.

ತೀರ್ಮಾನ: ಸಭೆಯು ಅನುಮೋದಿಸಿತು.

12) ದಿನಪತ್ರಿಕೆ ಹಾಗೂ ನಿಯತಕಾಲಿಕೆಗಳ ವೆಚ್ಚ:

ಉಪಕುಲಸಚಿವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ಕಛೇರಿಗೆ ದಿನಪತ್ರಿಕೆಯನ್ನು ತರಿಸಲು ಅಂದಾಜು ಮಾಡಲಾದ ಮೊತ್ತ ರೂ.5,000/- ಗಳ ಕಳೆದ ಸಾಲಿನಂತಯೇ ಮುಂದುವರಿಸುವ ಬಗೆಗೆ.

ತೀರ್ಮಾನ: ಸಭೆಯು ಅನುಮೋದಿಸಿತು.

13) ಡಾ. ಬಿ.ಆರ್. ಅಂಬೇಡ್ಕರ್ ರವರ ಜನ್ಮದಿನಾಚರಣೆ ಪ್ರಯುಕ್ತ ಪಿಹೆಚ್.ಡಿ. ಪಡೆದ ಹಾಗೂ ಸ್ನಾತಕ/ಸ್ನಾತಕೋತ್ತರ ವಿಭಾಗಗಳಲ್ಲಿ ರ್‍ಯಾಂಕ್ ಪಡೆದ ಅಭ್ಯರ್ಥಿಗಳಿಗೆ ಅಭಿನಂದನಾ ಸಮಾರಂಭ:

ಡಾ. ಬಿ.ಆರ್. ಅಂಬೇಡ್ಕರ್ ರವರ ಜನ್ಮದಿನಾಚರಣೆಯನ್ನು ಏಪ್ರಿಲ್ 2024ರ ಮಾಹೆಯಲ್ಲಿ ರೂ. 1,00,000/–ಗಳನ್ನು ಮುಂಗಡ ಪಡೆದು ದಿನಾಂಕ 14.04.2024 ರಂದು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ.

ಏಪ್ರಿಲ್ 2025ರ ಮಾಹೆಯಲ್ಲಿ ರೂ. 1,00,000/– ಗಳನ್ನು 2025–26ನೇ ಸಾಲಿನಲ್ಲಿ ಮುಂಗಡ ಪಡೆದು ದಿನಾಂಕ 14.04.2025 ರಂದು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು, ಹಾಗೂ ಸಂಶೋಧಕರಿಗೆ ಮತ್ತು ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದಿಸಲು ಅನುಮತಿಗಾಗಿ.

ತೀರ್ಮಾನ: ಸಭೆಯು ಅನುಮೋದಿಸಿತು.

14) ಡಾ. ಬಾಬೂ ಜಗಜೀವನ್‌ರಾಂ ರವರ ಜನ್ಮದಿನಾಚರಣೆ:

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕವು ಡಾ. ಬಾಬೂ ಜಗಜೀವನರಾಂ ರವರ ಜನ್ಮ ದಿನಾಚರಣೆಯನ್ನು ಏಪ್ರಿಲ್ 2024ರ ಮಾಹೆಯಲ್ಲಿ ದಿನಾಂಕ 05.04.2024 ರಂದು ಅನುಷ್ಠಾನಗೊಳಿಸಲಾಗಿದೆ.

ದಿ: 05.04.2025 ರಂದು ಜನ್ಮದಿನಾಚರಣೆಯನ್ನು ಆಚರಿಸಲು ರೂ. 40,000/– ಗಳನ್ನು 2025–26ನೇ ಸಾಲಿನಲ್ಲಿ ಮುಂಗಡ ಪಡೆಯುವ ಬಗೆಗೆ ಅನುಮತಿಗಾಗಿ.

ತೀರ್ಮಾನ: ಸಭೆಯು ಅನುಮೋದಿಸಿತು.

15) ಮಹರ್ಷಿ ವಾಲ್ಮೀಕಿ ರವರ ಜನ್ಮದಿನಾಚರಣೆ:

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕವು ಮಹರ್ಷಿ ವಾಲ್ಮೀಕಿ ರವರ ಜನ್ಮ ದಿನಾಚರಣೆಯನ್ನು ಅಕ್ಟೋಬರ್ 2024 ರ ಮಾಹೆಯಲ್ಲಿ ದಿನಾಂಕ: 17.10.2024ರಂದು ಅನುಷ್ಠಾನಗೊಳಿಸಲಾಗುವುದು.

ಮಹರ್ಷಿ ವಾಲ್ಮೀಕಿ ರವರ ಜನ್ಮದಿನಾಚರಣೆಯನ್ನು ಆಚರಿಸಲು ರೂ. 40,000/– ಗಳನ್ನು 2025–26ನೇ ಸಾಲಿನಲ್ಲಿ ಮುಂಗಡ ಪಡೆಯುವ ಬಗೆಗೆ ಅನುಮತಿಗಾಗಿ.

ತೀರ್ಮಾನ: ಸಭೆಯು ಅನುಮೋದಿಸಿತು.

## 2024–25ನೇ ಸಾಲಿನಲ್ಲಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳ ಅಂದಾಜು ಮೊತ್ತಕ್ಕೆ ಸ್ಥಾಯಿ ಸಮಿತಿ ಅನುಮೋದನೆಗಾಗಿ ನೀಡಿರುವ ವಿವರ

| ಕ್ರ ಸಂ. | ಕಾರ್ಯಕ್ರಮಗಳ ವಿವರ | ಅಂದಾಜು ವೆಚ್ಚ | |
|---|---|---|---|
| | | ಸಂಖ್ಯೆ | ರೂ. |
| | **I. ಉತ್ತಮೀಕರಣ ಲೆಕ್ಕ ಶೀರ್ಷಿಕೆ: ಕ್ರಿಯಾಯೋಜನೆ** | | |
| 01 | ಸಂಶೋಧಕರುಗಳ ಶಿಷ್ಯವೇತನ:<br>1) <u>ಕಿರಿಯ ಸಂಶೋಧಕರಿಗೆ ಶಿಷ್ಯವೇತನ (163 ಸಂಶೋಧಕರು)</u><br>ಏಪ್ರಿಲ್ 2024 ರಿಂದ ಮಾರ್ಚಿ 2025 ರವರೆಗೆ ಶಿಷ್ಯವೇತನ ರೂ. 20,000/– + HRA 16% (ರೂ. 3200/–) = 23,200/– x 12 ತಿಂಗಳು x 163 ವಿದ್ಯಾರ್ಥಿಗಳು = ರೂ. **4,53,79,200/–**<br><u>ವಾರ್ಷಿಕ ಸಾದಿಲ್ವಾರು ವೆಚ್ಚ:</u><br>ಕಲಾ & ವಾಣಿಜ್ಯ ವಿಭಾಗ ರೂ. 8,000/– x **147** ವಿದ್ಯಾರ್ಥಿಗಳು = ರೂ. **11,76,000/–**<br>ವಿಜ್ಞಾನ ವಿಭಾಗ ರೂ. 10,000/– x **16** ವಿದ್ಯಾರ್ಥಿಗಳು = ರೂ. **1,60,000/–**<br>ಒಟ್ಟು ರೂ. 4,67,15,200/–<br>2) <u>ಹಿರಿಯ ಸಂಶೋಧಕರಿಗೆ ಶಿಷ್ಯವೇತನ (50 ಸಂಶೋಧಕರು)</u><br>ಏಪ್ರಿಲ್ 2024 ರಿಂದ ಮಾರ್ಚಿ 2025 ರವರೆಗೆ ಶಿಷ್ಯವೇತನ ರೂ. 22,000/– + HRA 16% (ರೂ. 3520/–) = 25,520/– x 12 ತಿಂಗಳು x **50** ವಿದ್ಯಾರ್ಥಿಗಳು = ರೂ. **1,53,12,000/–**<br><u>ವಾರ್ಷಿಕ ಸಾದಿಲ್ವಾರು ವೆಚ್ಚ:</u><br>ಕಲಾ & ವಾಣಿಜ್ಯ ವಿಭಾಗ ರೂ. 10,000/– x **25** ವಿದ್ಯಾರ್ಥಿಗಳು = ರೂ. **2,50,000/–**<br>ವಿಜ್ಞಾನ ವಿಭಾಗ ರೂ. 12,000/– x **25** ವಿದ್ಯಾರ್ಥಿಗಳು = ರೂ. **3,00,000 /–**<br>ಒಟ್ಟು ರೂ. **1,58,62,000/–** | 213 | 6,25,77,200/– |
| 02 | ಬೌದ್ಧಿಕ ಕೌಶಲ್ಯಾಭಿವೃದ್ಧಿ ಕಾರ್ಯಾಗಾರ:<br>ಮೈಸೂರು ಕೇಂದ್ರಸ್ಥಾನ: 2 ದಿನಗಳು ರೂ. 3,00,000/– | 02 | 3,00,000/– |
| 03 | ಕೊಠಡಿ ಬಾಡಿಗೆ ಧನಸಹಾಯದ ವೆಚ್ಚ:<br>ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ಪದವಿ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿದ್ದು, ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಪಡೆಯದ ಹಾಗೂ ಬಾಡಿಗೆ ಕೊಠಡಿಗಳಲ್ಲಿ ವಾಸಿಸುತ್ತಿರುವ ಸ್ಥಳೀಯರಲ್ಲದ 2023–24ನೇ ಸಾಲಿನ ವಿದ್ಯಾರ್ಥಿಗಳಿಗೆ ಮಾಹೆಯಾನ ರೂ. 300/–ರಂತೆ 11 ತಿಂಗಳಿಗೆ (ಪ್ರವೇಶಾತಿ ಪಡೆದ ದಿನಾಂಕದಿಂದ ಪರೀಕ್ಷೆ ಮುಗಿಯುವವರೆಗೆ)<br>300 x 120 x 11 = ರೂ. **3,96,000/–** | 120 | 3,96,000/– |

| | | | |
|---|---|---|---|
| 04 | **ಪೌಢ ಪ್ರಬಂಧ ಧನಸಹಾಯದ ವೆಚ್ಚ:**<br>**<u>2023-24ನೇ ಸಾಲಿನ ವಿದ್ಯಾರ್ಥಿಗಳಿಗೆ</u>**<br>ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ರೂ. 1,500/- x 500 ವಿದ್ಯಾರ್ಥಿಗಳಿಗೆ = **7,50,000/-**<br>ಸ್ನಾತಕ ಪದವಿ ವಿದ್ಯಾರ್ಥಿಗಳಿಗೆ ರೂ. 1,200/- x 250 ವಿದ್ಯಾರ್ಥಿಗಳಿಗೆ = **3,00,000/-**<br>ಡಿಪ್ಲೋಮ ವಿದ್ಯಾರ್ಥಿಗಳಿಗೆ ರೂ. 750/- x 05 ವಿದ್ಯಾರ್ಥಿಗಳಿಗೆ = **<u>3,750/-</u>**<br>**ಒಟ್ಟು ರೂ. 10,53,750/-** | 755 | 10,53,750/- |
| 05 | **ಕ್ರೀಡೆ ಮತ್ತು ಪಠ್ಯೇತರ ಚಟುವಟಿಕೆಗಳ ಧನಸಹಾಯದ ವೆಚ್ಚ:**<br>**<u>2023-24ನೇ ಸಾಲಿನ ವಿದ್ಯಾರ್ಥಿಗಳಿಗೆ</u>**<br>ಸ್ನಾತಕ ಪದವಿ ಮತ್ತು ಸ್ನಾತಕೋತ್ತರ ಪದವಿಯ 20 ವಿದ್ಯಾರ್ಥಿಗಳಿಗೆ ತಲಾ ರೂ. 2000/- ದಂತೆ<br>20 x **2000** = **ರೂ. <u>40,000/-</u>** | 20 | 40,000/- |
| 06 | **UGC - NET/SLET** ಪೂರ್ವಭಾವಿ ಪರೀಕ್ಷೆಗಳಿಗೆ ತರಬೇತಿ ನೀಡಲು ತಗಲುವ ವೆಚ್ಚ | - | 1,00,000/- |
| 07 | **ICS / KAS ಪೂರ್ವಭಾವಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮುಖ್ಯ ಪರೀಕ್ಷೆಗೆ ಅನುಕೂಲವಾಗುವಂತೆ ಪ್ರೋತ್ಸಾಹಧನ:**<br>ICS / KAS ಅಭ್ಯರ್ಥಿಗಳಿಗೆ ತಲಾ ರೂ. 10,000/- x 05 ವಿದ್ಯಾರ್ಥಿಗಳಿಗೆ=<br>**ರೂ. 50,000/-** | 05 | 50,000/- |
| 08 | ಕಛೇರಿ ಕೆಲಸ ಕಾರ್ಯಗಳಿಗೆ ಬೇಕಾದ ಲೇಖನಿ ಸಾಮಾಗ್ರಿ ಖರೀದಿ | - | 50,000/- |
| 09 | ಕಛೇರಿಗೆ ಸಾಮಾಗ್ರಿಗಳ/ಉಪಕರಣಗಳ ಖರೀದಿ ಮತ್ತು ಯಂತ್ರೋಪಕರಣಗಳ ರಿಪೇರಿ | - | 1,00,000/- |
| 10 | **ಸಭೆಗಳ ವೆಚ್ಚ:**<br>(ಲಘು ಉಪಹಾರ ಮತ್ತು ಇತರೆ) | - | 15,000/- |
| 11 | **ಆದಾಯ ತೆರಿಗೆ ಕಾರ್ಯನಿರ್ವಹಣೆ ಮತ್ತು ಲೆಕ್ಕಪರಿಶೋಧನೆ ವೆಚ್ಚ:**<br>ಆದಾಯ ತೆರಿಗೆ ಕಟಾಯಿಸಿ, ಆದಾಯ ತೆರಿಗೆ ಇಲಾಖೆಗೆ ಸಂದಾಯ ಮಾಡಲು ಅಪ್‌ಲೋಡ್ ನಿರ್ವಹಣೆ ಮತ್ತು ಆಡಿಟ್ ಮಾಡುವವರಿಗೆ ಪಾವತಿಸಲು ಬೇಕಾಗುವ ಮೊತ್ತ | - | 3,000/- |
| 12 | **ದಿನಪತ್ರಿಕೆ ಹಾಗೂ ನಿಯತಕಾಲಿಕೆಗಳ ವೆಚ್ಚ:**<br>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ ಕಛೇರಿಗೆ | - | 5,000/- |
| 13 | **ಡಾ. ಬಿ.ಆರ್. ಅಂಬೇಡ್ಕರ್ ರವರ ಜನ್ಮದಿನಾಚರಣೆ ಪ್ರಯುಕ್ತ ಪಿಹೆಚ್.ಡಿ. ಪಡೆದ ಹಾಗೂ ಸ್ನಾತಕೋತ್ತರ ವಿಭಾಗಗಳಲ್ಲಿ ರ‍್ಯಾಂಕ್ ಪಡೆದ ಅಭ್ಯರ್ಥಿಗಳಿಗೆ ಅಭಿನಂದನಾ ಸಮಾರಂಭ:**<br>ಏಪ್ರಿಲ್-2025ರ ಮಾಹೆಯಲ್ಲಿ ರೂ. 1,00,000/- ಗಳನ್ನು ಮುಂಗಡ ಪಡೆದು ದಿನಾಂಕ 14.04.2025 ರಂದು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು. | 1 | 1,00,000/- |
| 14 | **ಡಾ. ಬಾಬೂ ಜಗಜೀವನ್ ರಾಮ್ ರವರ ಜನ್ಮದಿನಾಚರಣೆ:**<br>ಏಪ್ರಿಲ್ 2025ರ ಮಾಹೆಯಲ್ಲಿ ರೂ. 40,000/- ಗಳನ್ನು ಮುಂಗಡ ಪಡೆದು ದಿನಾಂಕ 05.04.2025 ರಂದು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು. | 1 | 40,000/- |

| | | | |
|---|---|---|---|
| 15 | **ಮಹರ್ಷಿ ವಾಲ್ಮೀಕಿ ರವರ ಜನ್ಮದಿನಾಚರಣೆ:**<br>ಅಕ್ಟೋಬರ್ 2024ರ ಮಾಹೆಯಲ್ಲಿ ಮುಂಗಡ ಪಡೆದು ದಿನಾಂಕ 17.10.2024 ರಂದು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು. | 1 | 40,000/- |
| | **ಮಹಾಮೊತ್ತ** | | **6,48,69,950/-** |

**(ಆರು ಕೋಟಿ ನಲವತ್ತೆಂಟು ಲಕ್ಷದ ಅರವತ್ತೊಂಭತ್ತು ಸಾವಿರದ ಒಂಬೈನೂರ ಐವತ್ತು ರೂಪಾಯಿಗಳು ಮಾತ್ರ)**

**ಅಂದಾಜಿಸಿದ ಕೆಲವು ಕಾರ್ಯಕ್ರಮಗಳಿಗೆ ಖರ್ಚಾಗದೇ ಅಥವಾ ಉಳಿಕೆಯಾದಲ್ಲಿ ಬೇರೆ ಕಾರ್ಯಕ್ರಮಗಳಿಗೆ ಉಪಯೋಗಿಸಲು ಸಮಿತಿಯು ತೀರ್ಮಾನಿಸಲು ಕೋರಿಕೆ.**

ಆದೇಶದ ಮೇರೆಗೆ

ಕುಲಸಚಿವ

ಗೆ,

1. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ಮಾನ್ಯ ಕುಲಪತಿಯವರ / ಕುಲಸಚಿವರ / ಹಣಕಾಸು ಅಧಿಕಾರಿಯವರ ಆಪ್ತ ಸಹಾಯಕರು, ಮೈಸೂರು ವಿ.ವಿ ಮೈಸೂರು
3. ಕಾರ್ಯನಿರ್ವಾಹಕರು ವಿಘ1, ವಿಘ2, ವಿಘ3, ವಿಘ4, ವಿಘ5 ವಿಘ6, ವಿಘ7, ವಿಘ8, ವಿಘ9, ಮತ್ತು ಪ.ಜಾತಿ ಮತ್ತು ಪ.ಪಂಗಡ ವಿಶೇಷ ಘಟಕ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರುಗಳಿಗೆ ಅವರವರ ವಿಷಯದಲ್ಲಿ ಹಿಂಪುಟಗಳಂತೆ ತೀರ್ಮಾನವಾಗಿರುವುದರಿಂದ ಸದರಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಬಗೆಗೆ ಮುಂದಿನ ಕ್ರಮ ತೆಗೆದುಕೊಳ್ಳಬೇಕೆಂದು ಆದೇಶಿಸಲಾಗಿದೆ.
4. ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಮೈಸೂರು ವಿಭಾಗ, ಮೈಸೂರು
5. ಕಛೇರಿ ಪ್ರತಿ